ಅವಳು ಅಲ್ಲೇ ಹತ್ತಿರದಲ್ಲಿರುವ ಜ್ಞಾನದೇಗುಲ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕಿಯಾಗಿ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದಾಳೆ. ಕೋಟೆ ಬಂಗಲೆಯಲ್ಲಿ ಸೊಂಪಾಗಿ ಬೆಳೆದಿದ್ದರೂ ಋತು ಅಂಜುಕುಳಿ ಯಾಗಿಯೇ ಇದ್ದಾಳೆ. ಪ್ರತಿಯೊಂದು ಸಣ್ಣ ವಿಷಯಕ್ಕೂ ಉದ್ವೇಗ ಗೊಳ್ಳುತ್ತಾಳೆ. ಕತ್ತಲೆಗೆ ಹೆದರುತ್ತಾಳೆ. ಮಿತಭಾಷಿ. ಬಂಗಲೆಯ ಗಿಡಮರ ಗಳನ್ನು, ಹಕ್ಕಿಗಳನ್ನು ಪ್ರಾಣದಂತೆ ಪ್ರೀತಿಸುತ್ತಾಳೆ. ಬಾಂಧವ್ಯಕ್ಕೆ, ಪ್ರೀತಿಗೆ, ಆತ್ಮೀಯತೆಗೆ ಮಂತ್ರಮುಗ್ಧಳಾಗುವ ಹೂವಿನಂತಹ ಹುಡುಗಿ ಋತುವಿನ ಮುಖವಿಂದು ಆತಂಕದಿಂದ ಕೂಡಿದೆ. ಅದಕ್ಕೆ ಕಾರಣವೂ ಇದೆ.

ಎರಡನೆಯ ಪಿ.ಯು.ಸಿ. ಓದುತ್ತಿದ್ದ ಅವಳ ವಿದ್ಯಾರ್ಥಿ ಪ್ರಶಾಂತ ಹಿಂದಿನ ದಿನ ರಾತ್ರಿ ಕಾಲೇಜಿನ ಹಾಸ್ಟೆಲ್ಲಿನಲ್ಲಿ ಭೀಕರವಾಗಿ ಕೊಲೆಯಾಗಿದ್ದಾನೆ. ಮೃಗವೊಂದು ದಾಳಿ ಮಾಡಿದಂತೆ ನಜ್ಜುಗುಜ್ಜಾಗಿರುವ ಆತನ ದೇಹವನ್ನು ನೋಡಿ ಭಯಗೊಂಡಿದ್ದಾಳೆ ಋತು. ನಗರದ ಹೊರವಲಯದಲ್ಲಿರುವ ಕಾಲೇಜಿನಲ್ಲಿ ಕಾಡುಪ್ರಾಣಿಯೊಂದು ನುಸುಳುವ ಯಾವ ಸಾಧ್ಯತೆಯೂ ಇಲ್ಲದಿರುವಾಗ ವಿದ್ಯಾರ್ಥಿ ಪ್ರಶಾಂತನ ಈ ರೀತಿಯ ಮರಣ ಎಲ್ಲರನ್ನೂ ಬೆಚ್ಚಿ ಬೀಳಿಸಿದೆ.

ಕೊಲೆಯಾದ ಪ್ರಶಾಂತನ ಯೋಚನೆಯಲ್ಲೇ ಬಂಗಲೆಯ ಗೇಟಿನ ಸಮೀಪ ಬಂದ ಋತುವಿಗೆ ಗೇಟಿನ ಮುಂದೆ ಸಿಡುಬಿನ ಮುಖದ, ರೌದ್ರ ಕಳೆಯ, ಕೋಲುಮುಖದ ವ್ಯಕ್ತಿಯೊಬ್ಬ ಮುಖಾಮುಖಿಯಾದಾಗ ಬೆಚ್ಚಿದಳು.

ಹಾಗೆ ಮುಖಾಮುಖಿಯಾದವನು ಬಂಗಲೆಯ ವಾಚ್‌ಮನ್ ಚಂದ್ರಪ್ಪನಾಗಿದ್ದನು. ಋತು ಅವನನ್ನು ಚಿಕ್ಕಂದಿನಿಂದಲೂ ನೋಡುತ್ತಿದ್ದಾಳೆ. ಅವನು ಹೀಗೆಯೇ ಇದ್ದಾನೆ. ಅವನನ್ನು ನೋಡಿದಾಗಲೆಲ್ಲಾ ಋತು ಹೀಗೆಯೇ ಬೆಚ್ಚುತ್ತಾಳೆ. ಅವನ ಸಿಡುಬಿನ ಮುಖ, ಕೆಂಪು ಕಣ್ಣುಗಳು ಅವಳಿಗೆ ಅಮಾನುಷವಾದ ಭೀತಿಯೊಂದನ್ನು ಚಿಕ್ಕಂದಿನಿಂದಲೂ ಹುಟ್ಟು ಹಾಕಿದೆ.

ಇದೇನು ಋತು, ಮಟಮಟ ಮಧ್ಯಾಹ್ನವೇ ಬಂಗಲೆಗೆ ಬಂದು ಬಿಟ್ಟಿದ್ದಿ....

ಅವನು ಗೊಗ್ಗರು ಧ್ವನಿಯಲ್ಲಿ ಪ್ರಶ್ನಿಸಿದ.

ಅವಳೇನಾದರೂ ಉತ್ತರಿಸಲೇಬೇಕಿತ್ತು. ಇಲ್ಲದಿದ್ದರೆ ಅಷ್ಟು ಸುಲಭವಾಗಿ ಅವನು ಬಿಡುವವನಲ್ಲವಲ್ಲ.

ಚಂದ್ರಪ್ಪ.... ಕಾಲೇಜಿಗೆ ಸಂಬಂಧಪಟ್ಟ ಒಬ್ಬರು ಸತ್ತು ಹೋಗಿದ್ದಾರೆ, ಅದಕ್ಕೆ ಇವತ್ತು ರಜೆ.... ಮಾತುಗಳನ್ನು ತೇಲಿಸಿದಳು. ಕಾಲೇಜಿನಲ್ಲಿ ಕೊಲೆಯಾದ ವಿಷಯವನ್ನು ಅವನಿಗೆ ಹೇಳುವ ಅಗತ್ಯವೇನೂ ಅವಳಿಗೆ ಕಾಣಲಿಲ್ಲ.

'ತಿರುಗೋ ಭೂಮಿ ಇರೋವರೆಗೂ ಸಾಯುವ ಜೀವಗಳಿಗೇನು ಕಮ್ಮಿ ಬಿಡು, ನೀನಿದಕ್ಕೆಲ್ಲಾ ತಲೆಕೆಡಿಸಿಕೊಳ್ಬೇಡ, ಆರಾಮಾಗಿರು....'

ತನ್ನಲ್ಲೇ ಗೊಣಗಿಕೊಂಡ ಚಂದ್ರಪ್ಪ ಊಟ ಮಾಡಲು ಔಟ್‌ಹೌಸಿನ ಕಡೆ ನಡೆದರೆ, ಅವನ ಮಾತುಗಳು ಕಿವಿಗೆ ಬಿದ್ದರೂ ಬೀಳದವಳಂತೆ ತನ್ನ ಗಾಡಿಯನ್ನು ಪಾರ್ಕ್ ಮಾಡಲು ಮುಂದುವರಿದಳು ಋತು.

ಅವಳಿಗೆ ಬುದ್ಧಿ ತಿಳಿದಂದಿನಿಂದಲೂ ಚಂದ್ರಪ್ಪನನ್ನು ನೋಡುತ್ತಿದ್ದಾಳೆ. ತಂದೆ ಅವನ ಕುಟುಂಬಕ್ಕೆ ಬಂಗಲೆಗೆ ಹೊಂದಿಕೊಂಡಂತಿರುವ ಔಟ್‌ಹೌಸ್ ನ್ನು ಕೊಟ್ಟಿದ್ದಾರೆ. ದಿನಪೂರ್ತಿ ಬಂಗಲೆಯ ಕಾವಲು ಕಾಯುವ ಚಂದ್ರಪ್ಪ ಆಗಾಗ ಇತರೆ ಚಿಲ್ಲರೆ ಕೆಲಸಗಳನ್ನು ಮಾಡುತ್ತಾನೆ. ಅವನ ಹೆಂಡತಿ ಸುಂದರಿ ಬಂಗಲೆಯ ಕಸಮುಸುರೆ ಮಾಡುತ್ತಾಳೆ. ಚಂದ್ರಪ್ಪ ಒರಟು ಮಾತಿನ ವಿಕಾರ ರೂಪಿಯಾದರೆ ಸುಂದರಿ ನೋಡಲು ಲಕ್ಷಣವಾಗಿಯೇ ಇದ್ದಾಳೆ. ಆದರೆ ಸದಾ ಮೌನಿ. ಚುಟುಕು ಮಾತಿನಲ್ಲೇ ಉತ್ತರಿಸಿ ಬಿಡುತ್ತಾಳೆ. ಮಕ್ಕಳಿಲ್ಲದ ಆ ದಂಪತಿಗಳನ್ನು ನೋಡುತ್ತಲೇ ಬೆಳೆದಿದ್ದಾಳೆ ಋತು. ಹತ್ತಿರವಿದ್ದರೂ ಎಂದೂ ಆತ್ಮೀಯರಾಗದ ಅವರ ನಡವಳಿಕೆಗಳು ಒಮ್ಮೊಮ್ಮೆ ಬೇಸರವನ್ನು ತರಿಸುವುದೂ ಇದೆ.

ಗಾಡಿಯನ್ನು ಪಾರ್ಕ್ ಮಾಡಿದ ಋತು ಭವ್ಯವಾದ ಕಲ್ಲಿನ ಕಟ್ಟಡ, ಎರಡಂತಸ್ತಿನ ಬಂಗಲೆ ಉನ್ನತಿಯ ಮುಂದೆ ನಿಂತಳು. ಅದು ಅವಳು ತನ್ನ ಬಾಲ್ಯವನ್ನು ಕಳೆದ ಬಂಗಲೆ.... ಅವಳ ಎಲ್ಲ ನೋವುಗಳಿಗೆ, ನಿರೀಕ್ಷೆಗಳಿಗೆ ಸ್ಪಂದಿಸಿರುವ ಬಂಗಲೆ. ಹಲವಾರು ಬಳ್ಳಿಗಳು ಆ ಬಂಗಲೆಯ ಗೋಡೆಗಳನ್ನು ಹಬ್ಬಿ ನಿಂತಿದೆ. ತಕ್ಷಣ ನೋಡಿದರೆ ಯಾವುದೋ ಪುರಾತನ ಕೋಟೆಯನ್ನು ನೆನಪಿಸುವ ಆ ಬಂಗಲೆ ಸುತ್ತಮುತ್ತಲೂ ಕೋಟೆಬಂಗಲೆ ಎಂದೇ ಹೆಸರು ಮಾಡಿದೆ. ಬಿಸಿಲು,ಚಳಿ,ಮಳೆಗೆ ಮೈಯೊಡ್ಡಿ ನಿಂತಿರುವ ಬಂಗಲೆಯ ಮುಂದೆ ವಿಶಾಲವಾದ ಕಾರಂಜಿ ಉದ್ಯಾನವನವಿದ್ದರೆ ಇಕ್ಕೆಲಗಳಲ್ಲೂ ಮಾವು, ಬೇವು, ಸಂಪಿಗೆ, ಪಾರಿಜಾತ ಮುಂತಾದ ಮರಗಳಿವೆ. ಜೊತೆಗೆ ಅಪರೂಪದ ಎರಡು ಶ್ರೀಗಂಧದ ಮರಗಳೂ ಇವೆ. ಹೊರಗಿನಿಂದ ನೋಡಿದರೆ ಅರಣ್ಯದ ನಡುವೆ ಕೋಟೆಯೊಂದು ತಲೆ ಎತ್ತಿದಂತೆ ಕಾಣುವ ಆ ಬಂಗಲೆಯೆಂದರೆ ಎಲ್ಲರಿಗೂ ಗೌರವದ ಭಾವನೆಯಿದೆ.

ಬಂಗಲೆಯ ರಸ್ತೆಯಲ್ಲೇ ಮುಂದುವರೆದರೆ ಒಂದು ವಿಶಾಲವಾದ ಕೆರೆಯಿದೆ. ಇತ್ತೀಚೆಗೆ ಅದನ್ನು ಸ್ವಚ್ಛ ಮಾಡಿ ಅದರ ಸುತ್ತ ಮೆಟ್ಟಿಲುಗಳನ್ನು ನಿರ್ಮಾಣ ಮಾಡಿದ್ದಾರೆ. ವಾರಾಂತ್ಯದಲ್ಲಿ ದೋಣಿ ವಿಹಾರವೂ ಇರುವುದರಿಂದ ಅದೊಂದು ಚಿಕ್ಕ ಪ್ರವಾಸಿತಾಣವೂ ಆಗಿದೆ. ಕೆರೆಯಲ್ಲಿ ಅರಳಿ ನಗುವ ಕೆಂದಾವರೆಗಳನ್ನು ನೋಡಲು ಬರುವ ಜನ ದೂರದಿಂದಲೇ ಕೋಟೆ ಬಂಗಲೆ ಉನ್ನತಿಯನ್ನು ನೋಡುತ್ತಲೇ ಮುಂದುವರಿಯುತ್ತಾರೆ.

ಕೋಟೆ ಬಂಗಲೆಯ ಹೊರಬಾಗಿಲಿನತ್ತ ಬಂದಳು ಋತು. ಚಿಕ್ಕಮ್ಮ ಕಲಾವತಿ ಹೊರಬಾಗಿಲಿನ ಪಕ್ಕದಲ್ಲೇ ಹಬ್ಬಿದ್ದ ಅಂಗೈಯಗಲದ ಮನಿ ಪ್ಲಾಂಟಿನ ಬಳ್ಳಿಯನ್ನು ಸ್ವಚ್ಛ ಮಾಡುತ್ತಿದ್ದವರು ಯಾರೋ ಬಂದರೆಂದು ಹಿಂದಿರುಗಿ ನೋಡಿದವರಿಗೆ ಋತುವನ್ನು ನೋಡಿ ಆಶ್ಚರ್ಯವಾಯಿತು.

ಈ ಸುಡುಬಿಸಿಲಿನಲ್ಲಿ ಬಾಡಿದ ಹೂವಿನಂತೆ ಕಂಡವಳನ್ನು ಮರುಕದಿಂದ ನೋಡಿದರು. ನೀಳಕಾಯದ ಚೆಲುವೆ. ಬಹುಶಃ ಅವಳು ತನ್ನ ತಾಯಿಯನ್ನು ಹೋಲುತ್ತಾಳೇನೋ. ಸಾಧಾರಣ ಎತ್ತರದ, ಅಷ್ಟೇನೂ ಸ್ಫುರದ್ರೂಪಿಯಲ್ಲದ ತಂದೆ ಪುರುಷೋತ್ತಮರ ಚಹರೆಗಳು ಅವಳಿಗೆ ಪುಣ್ಯಕ್ಕೆ ಬರಲಿಲ್ಲವಲ್ಲ. ಆದರೆ ಆ ಎಲ್ಲಾ ಚಹರೆಗಳು ತನ್ನ ಮಗ ಭರತನಿಗೆ ಬಂದಿದೆಯಲ್ಲವೇ? ಗಿಡ್ಡಗಿನ ದೇಹ....ಕಪ್ಪು ಚಹರೆ....ಪುಟ್ಟದಾದ ತೀಕ್ಷ್ಣ ಕಣ್ಣುಗಳು....

'ಋತು, ಅದೇನು ಇವತ್ತು ಬೇಗ ಬಂದ್ಬಿಟ್ಟೆ?'

ಚಿಕ್ಕಮ್ಮ ಕಲಾವತಿಯ ಪ್ರಶ್ನೆಗೆ ಮರೆತಂತಿದ್ದ ಪ್ರಶಾಂತನ ನೆನಪು ಮತ್ತೆ ಮನಸ್ಸಿಗೆ ಲಗ್ಗೆ ಹಾಕಿತು.

ಕಾಲೇಜಿನಲ್ಲಿ ಆತ ದಾರಣವಾಗಿ ಕೊಲೆಯಾದ ವಿಷಯವನ್ನು ಚುಟುಕಾಗಿ ವಿವರಿಸಿದಳು. ಅದನ್ನು ಕೇಳಿ ಕಲಾವತಿಯ ಮುಖವೂ ದುಃಖದಿಂದ ಕುಗ್ಗಿತು.

ಎಂಥಾ ಕೆಲಸವಾಯ್ತು ಋತು, ಬರುಬರುತ್ತಾ ಗಾರ್ಡನ್ ಸಿಟಿ ಯಾಗಿದ್ದ ನಮ್ಮ ಬೆಂಗ್ಳೂರು ಈಗ ಯಾವ್ಯಾವುದಕ್ಕೋ ಪ್ರಸಿದ್ಧಿಯಾಗ್ತಿದೆ, ದಿನಾ ಬೆಳಗಾದ್ರೆ ಕೊಲೆ, ದರೋಡೆ, ಸರಗಳ್ಳತನ ಹೆಚ್ಚಾಗ್ತಾನೇ ಇದೆ, ನಿಂಗೊತ್ತಾ ಋತು, ಆತ್ಮಹತ್ಯೆ ಮಾಡಿಕೊಳ್ಳೋರ ಸಂಖ್ಯೇನೂ ಇಲ್ಲೇ ಜಾಸ್ತಿ ಇರೋದಂತೆ, ಒಟ್ಟಿನಲ್ಲಿ ಕಾಲ...ಅಲ್ಲಲ್ಲ ಬೆಂಗ್ಳೂರು ಕೆಟ್ಟು ಹೋಯ್ತು ಬಿಡು...

ಬಂಗಲೆಯಲ್ಲಿ ಎಲ್ಲರ ಮಾತುಗಳನ್ನೂ ತಾವೊಬ್ಬರೇ ಆಡುವ ಚಿಕ್ಕಮ್ಮ ಕಲಾವತಿಯನ್ನು ನೋಡಿದಳು ಋತು. ಕಾಟನ್ ಸೀರೆಯುಟ್ಟು, ಬಿಗಿಯಾಗಿ ಉದ್ದ ಜಡೆ ಹೆಣೆದುಕೊಂಡು, ದೊಡ್ಡ ಕುಂಕುಮ ಬಿಂದಿಯನ್ನು ಹಣೆಯಲ್ಲಿ ಇರಿಸಿಕೊಂಡರೆ ನಿರಾಭರಣ ಸುಂದರಿ.

ಚಿಕ್ಕಮ್ಮನ ಮಾತುಗಳು ಬೆಂಗಳೂರಿನ ಇಂದಿನ ಸ್ಥಿತಿಗೆ ಕನ್ನಡಿ ಹಿಡಿದಂತಿತ್ತು.

ಕಲಾವತಿ ತಾವೂ ಋತುವಿನೊಂದಿಗೆ ಬಂಗಲೆಯೊಳಕ್ಕೆ ಹೆಜ್ಜೆ ಹಾಕಿದರು.

ಬಂಗಲೆಯ ಹೊರಭಾಗದಂತೆ ಒಳ ಭಾಗವೂ ಸುಂದರ, ಕಲಾತ್ಮಕ. ಒಟ್ಟು 6 ದೊಡ್ಡ ಸುಸಜ್ಜಿತ ರೂಮುಗಳಿರುವ ಬಂಗಲೆ.

'ಚಿಕ್ಕಮ್ಮ, ಭರತ ಎಲ್ಲಿ ಕಾಣ್ತಿಲ್ಲ....'

ಋತುವಿನ ದೃಷ್ಟಿ ಭರತನಿಗಾಗಿ ಸುತ್ತಾ ಹುಡುಕಾಡಿತು.

'ಅಯ್ಯೋ, ಭರತನ ವಿಷ್ಯ ನಿಂಗೂ ಗೊತ್ತಲ್ಲ ಋತು, ಬೆಳಗ್ಗಿನಿಂದ ಮಹಡಿ ಮೇಲಿನ ರೂಮಿನಲ್ಲಿ ಮುಸುಕು ಹೊದ್ದು ಮಲಗಿಬಿಟ್ಟಿದ್ದಾನೆ, ತಿಂಡಿ, ಊಟಕ್ಕೂ ಏಳುತ್ತಿಲ್ಲ, ಇವೆಲ್ಲಾ ಅವ್ನಿಗೆ ಸಾಧಾರಣ ವಿಷ್ಯಗಳಲ್ವಾ.... ಹೇಗಿದ್ದ ಹುಡುಗ ಹೇಗಾಗ್ಬಿಟ್ಟ ನೋಡು, ಅವನೊಬ್ಬ ಸರಿಯಾಗಿದ್ದಿದ್ರೆ...'. ಎಂದ ಕಲಾವತಿ ಕಣ್ಣೊರೆಸಿಕೊಂಡಾಗ ಋತುವಿಗೂ ಸಂಕಟವಾಯಿತು.

ಏನಾಗಿದೆ ಭರತನಿಗೆ? ಕಳೆದೆರಡು ವರ್ಷಗಳಿಂದ ಹೀಗೆಯೇ ಇದ್ದಾನೆ. ತಾನಾಯಿತು, ತನ್ನ ಪಾಡಾಯಿತು ಎಂಬಂತೆ, ಯಾರೊಂದಿಗೂ ಮಾತನಾಡುವುದಿಲ್ಲ, ಯಾವ ಭಾವನೆಯನ್ನೂ ವ್ಯಕ್ತಪಡಿಸುವುದಿಲ್ಲ.

'ಭರತನ ಬಗ್ಗೆ ತಲೆಕೆಡಿಸಿಕೊಳ್ಬೇಡ ಋತು, ನೀನು ಹೋಗಿ ರಿಫ್ರೆಷ್ ಆಗಿ ಬಾ, ಇಬ್ರೂ ಒಟ್ಟಿಗೆ ಊಟ ಮಾಡೋಣ...'. ಎಂದರು ಕಲಾವತಿ.

ಮಹಡಿಯಲ್ಲಿರುವ ತನ್ನ ರೂಮಿಗೆ ಬಂದ ಋತು ತಣ್ಣಗೆ ಷವರಿನ ಕೆಳಗೆ ನಿಂತಳು. ಚಳಿಗಾಲದ ದಿನವಾಗಿದ್ದರೂ ಆ ತಂಪು ಹಿತವೆನಿಸಿತು. ತನ್ನೊಂದಿಗೆ ಊಟ ಮಾಡಲು ಕಾಯುತ್ತಿರುವ ಚಿಕ್ಕಮ್ಮನ ನೆನಪಾಯಿತು.